**<u>ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಅಫಜಲಪೂರ</u>**

# <u>ಸಿ.ಸಿ.ನಂ.01/2024</u>

**<u>ಫಿರ್ಯಾದಿಃ</u>** ಸರ್ಕಾರದ ಪರವಾಗಿಃ ಆರಕ್ಷಕ ಉಪ ನಿರೀಕ್ಷಕರು ಅರಣ್ಯ ಸಂಚಾರಿ ದಳ ಕಲಬುರಗಿ.

**-ಃ ವಿರುದ್ದ ಃ-**

**<u>ಆರೋಪಿ/ತರುಃ</u>**

01. ಲಾಲಸಿಂಗ ತಂದೆ ಲಖನ ಸಿಂಗ ಚಿತೊಡಿಯಾ,
ವಃ 39 ವರ್ಷ, ಉಃ ವನಸ್ಪತಿ ವ್ಯಾಪಾರ,
ವಾಸಃ ಸೊಂಕನ ಹಟ್ಟಿ ಗ್ರಾಮ, ತಾಃ ಅಥಣಿ, ಜಿಃ ಬೆಳಗಾವಿ.

02. ಭಾಷಾ ಸಿಂಗ ತಂದೆ ಜೀವನ ಸಿಂಗ ಚಿತೊಡಿಯಾ,
ವಃ 22 ವರ್ಷ, ಉಃ ವನಸ್ಪತಿ ವ್ಯಾಪಾರ,
ವಾಸಃ ಸೊಂಕನ ಹಟ್ಟಿ ಗ್ರಾಮ, ತಾಃ ಅಥಣಿ, ಜಿಃ ಬೆಳಗಾವಿ.

**<u>ದೋಷಾರೋಪಣೆ</u>**

ನಾನು ಶ್ರೀ ಅನಿಲ ಅಮಾತೆ., ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಅಫಜಲಪೂರ, ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಆರೋಪಕ್ಕೆ ಗುರಿಪಡಿಸುತ್ತೇನೆ.

ದಿನಾಂಕ 31.03.2023 ರಂದು ಸಾಯಂಕಾಲ ಅಫಜಲಪೂರ ತಾಲೂಕಿನ ಚೌಡಾಪೂರ ಗ್ರಾಮದ ಕಡಗಂಚಿ ಪೆಟ್ರೋಲ ಪಂಪ ಹತ್ತಿರದ ರಸ್ತೆಯ ಪಕ್ಕ 1 ಮತ್ತು 2ನೇ ಆರೋಪಿತರಾದ ನೀವುಗಳು ಯಾವುದೇ ಪರವಾನಿಗೆ ಇಲ್ಲದೆ ಏರಗನ್ನಿನ ಸಹಾಯದಿಂದ ಹಾಗೂ ಕಬ್ಬಿಣದ ಬಾಲಾ (ಭರ್ಚಿ)ಯಿಂದ ನಿಮ್ಮ ಸ್ವಂತ ಲಾಭಕ್ಕಾಗಿ ಒಂದು ಕಾಡು ಹಂದಿಯನ್ನು ಬೇಟೆಯಾಡಿ ಕೊಂದು ಒಂದು ಪ್ಲಾಸ್ಟೀಕ್ ಟ್ರೇದಲ್ಲಿ ಕಾಡು ಹಂದಿಯ ಅಂದಾಜು 8 ಕೆ.ಜಿ. ಮಾಂಸ, ಎರಡು ಪ್ಲಾಸ್ಟೀಕ್ ಬಾಟಲದಲ್ಲಿ ಅಂದಾಜು 100 ಎಮ್.ಎಲ್. ಕಾಡು ಹಂದಿಯ ಎಣ್ಣೆ ಮತ್ತು ದಿನಾಂಕಃ 01.04.2023 ರಂದು ಬೆಳಿಗ್ಗೆ 11-00 ಗಂಟೆ ಸುಮಾರಿಗೆ ಮರದಲ್ಲಿ ಕುಳಿತ ಎರಡು ಕಾಡು ಪಾರಿವಾಳಗಳನ್ನು ಗುಲೆರಿಯಿಂದ ಬೇಟೆಯಾಡಿ ಕೊಂದು ಮಾರಾಟ ಮಾಡುತ್ತಿದ್ದ ಕಾರಣ, ಆ ಮೂಲಕ 1 ಮತ್ತು 2ನೇ ಆರೋಪಿತರಾದ ನೀವು ಕಲಂ.9, 39, 40 ಮತ್ತು 51 ವನ್ಯಜೀವಿ ಸಂರಕ್ಷಣಾ ಕಾಯಿದೆ-1972 ಮತ್ತು ಆರ್ಮ್ಸ್ ಆ್ಯಕ್ಟ ಕಲಂ 25 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ

ಸಂಜ್ಞೆಯೊಳಗೆ ಮಾಡಿರುವೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

**ಆ ರೋ ಪ ಣೆ**

ಪ್ರಃ-1) ಮೇಲ್ಕಾಣಿಸಿದ ದೋಷಾರೋಪಣೆಯನ್ನು ಓದಿ ಹೇಳಿ ತಿಳಿಸಿದ್ದನ್ನು ಅರ್ಥರ್ಮಾಡಿಕೊಂಡಿದ್ದೀರಾ?

ಉಃ ಆ-1

ಆ-2

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತೀರೊ ಅಥವಾ ವಿಚಾರಣೆ ನಡೆಯಬೇಕಾ?

ಉಃ ಆ-1

ಆ-2

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ದಿನಾಂಕಃ 12-02-2025 ಪ್ರ.ದ.ನ್ಯಾ.ದಂ. ಅಫಜಲಪೂರ.